**ಸಾಕ್ಷಿಯನ್ನು ದಿನಾಂಕ 06-04-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಬಿ ಎ ವಕೀಲರಿಂದಃ</u>**

**4.** ನಾನು ಹುಟ್ಟಿದಾಗಿನಿಂದಲೂ ದಾವಾ ಆಸ್ತಿಯನ್ನು ನೋಡುತ್ತಿರುತ್ತೇನೆ. ದಾವಾ ಆಸ್ತಿ ಮೂಲತಃವಾಗಿ ರಾಮಯ್ಯ ಎಂಬುವರಿಗೆ ಸೇರಿದಂತಹ ಆಸ್ತಿ ಆಗಿರುತ್ತದೆ. **1995** ರಿಂದ **2020** ರವರೆಗೂ ಪಹಣಿ ಪತ್ರಿಕೆಗಳನ್ನು ನಾನು ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆಯುವ ಸಮಯದಲ್ಲಿ ನೋಡಿರುತ್ತೇನೆ. **1988** ನೇ ಸಾಲಿನಲ್ಲಿ ರಾಮಯ್ಯರವರ ಹೆಸರಿನಲ್ಲಿ **2** ಎಕರೆ **27** ಗುಂಟೆ ಬರುತ್ತಿತ್ತು. ಯಾರು ಯಾರು ವಿಭಾಗ ಮಾಡಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. **1995** ರಲ್ಲಿ ಸ.ನಂ **5/1** ರಲ್ಲಿ **19** ಗುಂಟೆ, ಸ.ನ **5/3** ರಲ್ಲಿ **2** ಎಕರೆ **1** ಗುಂಟೆ ರಾಮಯ್ಯರವರ ಹೆಸರಿನಲ್ಲಿ ಬರುತ್ತಿತ್ತು. **MR no 2/1992-93** ನ್ನು ನಾನು ನೋಡಿರುತ್ತೇನೆ. ಸದರಿ ಎಂ ಆರ್ ನ ಪ್ರಕಾರ ಖರಾಬು ಸೇರಿ **2** ಎಕರೆ **28** ಗುಂಟೆ ಜಮೀನು ರಾಮಯ್ಯರವರಿಗೆ ಬಂದಿರುವ ಬಗ್ಗೆ ಹಾಗೂ ಉಳಿಕೆ ಅವರ ಸಹೋದರರಿಗೆ ಎಷ್ಟು ಜಮೀನು ಹೋಗಿರುತ್ತದೆ ಎಂಬುದರ ಬಗ್ಗೆ ಕಾಣಿಸಿರುತ್ತಾರೆ. ಎಂ ಆರ್ ಸಂ **2/1992-93** ರ ಪ್ರಕಾರ ರಾಮಯ್ಯನ ಭಾಗಕ್ಕೆ **2** ಎಕರೆ **28** ಗುಂಟೆ ಬಂದಿರುವ ಕಂಡುಬರುತ್ತದೆ ಎಂದರೆ ಸರಿ.

**5. 1995** ರಲ್ಲಿ ರಾಮಯ್ಯ ಊರಿನಲ್ಲಿ ಇಲ್ಲ ಎಂದು ಅವರ ಮಗನಿಗೆ ನೋಟೀಸ್ ನೀಡಿ **1** ನೇ ಪ್ರತಿವಾದಿ ಮತ್ತು ಅವರ ಅಣ್ಣ ತಮ್ಮಂದಿರು ಸ.ನ. **5** ನ್ನು ಪೋಡು ಮಾಡಿಸಿರುತ್ತಾರೆ. ಆ ರೀತಿ ಪೋಡಾಗಿರುವ ಬಗ್ಗೆ ನಾನು ಕ್ರಯಕ್ಕೆ ಪಡೆಯುವ ಸಮಯದಲ್ಲಿ ಗೊತ್ತಾಗಿರುತ್ತದೆ. ಪೋಡಿಗೆ ಸಂಬಂಧಿಸಿದಂತೆ ನಾನು **ADLR** ಕಛೇರಿಯಲ್ಲಿ ಸರ್ವೆ ದಾಖಲೆಗಳನ್ನು ನೋಡಿರುತ್ತೇನೆ. **1** ನೇ ಪ್ರತಿವಾದಿ ಸರ್ವೆ ಕಟ್ಟಿ ಹೇಳಿಕೆ ನೀಡಿರುವ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿ ರಾಮಯ್ಯರವರಿಗೆ ವಿಭಾಗದ ಪ್ರಕಾರ ಬದಿರುವ ಬಗ್ಗೆ ನನ್ನ ಹೆಸರಿಗೆ ಆಗಿರುವ ಕ್ರಯಪತ್ರದಲ್ಲಿ ಬರೆದಿರುತ್ತಾರೆಂದರೆ ಸರಿ. ನನ್ನ ಹೆಸರಿಗೆ ಆದ ಕ್ರಯಪತ್ರದಲ್ಲಿ ಎಂ ಆರ್ ಸಂ **2/1992-93** ರಂತೆ ರಾಮಯ್ಯರವರಿಗೆ ದಾವಾ ಆಸ್ತಿ ಬಂದಿರುವ ಬಗ್ಗೆ ಒಕ್ಕಣೆಯನ್ನು ನಮೂದು ಮಾಡಿರುತ್ತಾರೆಂದರೆ ಸರಿ. **ASLRMPR140/1993-94** ರ ಆದೇಶದ ಏನೆಂದು ನಾನು ಪರಿಶೀಲನೆ ಮಾಡಿರುವುದಿಲ್ಲ. ದಾವಾ ಸರ್ವೆ ನಂಬರ್ ನ್ನು ರಾಮಯ್ಯ ಮತ್ತು ಅವರ ಸಹೋದರರು ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸರಿ. ಲಕ್ಷ್ಮಯ್ಯ ಮತ್ತು

ರಾಮಾಂಜನಯ್ಯರವರ ಭಾಗಕ್ಕೆ ಬಂದ ಜಮೀನನ್ನು ಪ್ರತ್ಯೇಕವಾಗಿ ಪೋಡಿ ಮಾಡಿರುವುದಿಲ್ಲ ಎಂದರೆ ಸರಿ. ಪೂರ್ವಕ್ಕೆ ಮುತ್ತಾಂಜನಪ್ಪನಿಗೆ ಸೇರಿದ ಸ.ನ. **5/2** ಜಮೀನು ಪಶ್ಚಿಮಕ್ಕೆ ನಮಗೆ ಸೇರಿದ ಜಮೀನು, ಉತ್ತರಕ್ಕೆ ಕೆ ಹೊಂಬಯ್ಯರವರ ಜಮೀನು, ದಕ್ಷಿಣಕ್ಕೆ ಮುತ್ತಾಂಜನಪ್ಪನ ಜಮೀನು ಬರುತ್ತದೆ ಎಂದು ನನ್ನ ಹೆಸರಿಗೆ ಆದ ಕ್ರಯಪತ್ರದಲ್ಲಿನ ಆಸ್ತಿಯ ಚಕ್ಕುಬಂದಿಯನ್ನು ಬರೆದಿರುತ್ತಾರೆ. ದಾವಾ ಆಸ್ತಿಯ ಪಶ್ಚಿಮಕ್ಕೆ ನಮಗೆ ಸೇರಿದ ಸ.ನ **4** ಬರುತ್ತದೆ.

**6.** ರಾಮಯ್ಯ ನನ್ನ ಮಾವ. ರಾಮಯ್ಯನಿಗೆ ವಿಭಾಗದ ಪ್ರಕಾರ ಬಂದ ಜಮೀನಿನ ಚಕ್ಕುಬಂದಿ ನನ್ನಿಂದ ಹೇಳಲಾಗುವುದಿಲ್ಲ. ನಮಗೆ ಸೇರಿದ ಜಮೀನು ಹಾಗೂ ರಾಮಯ್ಯರವರಿಗೆ ವಿಭಾಗದಲ್ಲಿ ಬಂದ ಜಮೀನಿನ ಮಧ್ಯದಲ್ಲಿ ಸುಮಾರು **50** ಮೀಟರ್ ಅಂತರ ಇರುತ್ತದೆ. ಸ.ನ **5/2** ಮುತ್ತಾಂಜನಪ್ಪರವರಿಗೆ ವಿಭಾಗದಲ್ಲಿ ಬಂದಿರುತ್ತದೆ. ನಮಗೆ ಸೇರಿದ ಸ.ನ. **4** ರ ಪೂರ್ವ ದಿಕ್ಕಿಗೆ ರಾಮಯ್ಯರವರಿಗೆ ಸೇರಿದ ಜಮೀನು ಬರುತ್ತದೆ. ಸದರಿ ಸರ್ವೆ ನಂಬರ್ ಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಆದ ಕ್ರಯಪತ್ರದಲ್ಲಿ ನನ್ನ ಆಸ್ತಿಯ ಪೂರ್ವ ದಿಕ್ಕಿಗೆ ರಾಮಯ್ಯರವರ ಜಮೀನು ಎಂದು ಬರೆದಿರುತ್ತಾರೆ. ಆ ಬಗ್ಗೆ ನಾನು ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಪ್ರತಿವಾದಿಗಳು ದಾವಾ ಆಸ್ತಿ ಅವರಿಗೆ ಸೇರಿದ್ದು ಎಂದು ನನ್ನ ಮೇಲೆ ಹಲ್ಲೆ ಮಾಡಿರುವ ಕಾರಣ ನಾನು ಅವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ರಾಮಯ್ಯರವರಿಂದ ದಾವಾ ಆಸ್ತಿಯನ್ನು ಸ್ವಾಧೀನಕ್ಕೆ ಪಡೆದುಕೊಳ್ಳಲು ಹೋದಾಗ ಪ್ರತಿವಾದಿಗಳು ದಾವಾ ಆಸ್ತಿ ನಮಗೆ ಸೇರಿದ್ದು ಎಂದು ಗಲಾಟೆ ಮಾಡಿರುತ್ತಾರೆ.

**7.** ಸರ್ವೆ ನಂ **5/1** ಖಾತೆಯನ್ನು ಅನಧೀಕೃತವಾಗಿ ಪೋಡು ಮಾಡಿ ರಾಮಯ್ಯರವರ ಹೆಸರಿಗೆ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಸ.ನ.**5/1** ನಮಗೆ ಸೇರಿದ ಸ.ನ. **4/1** ಕ್ಕೆ ಹೊಂದಿಕೊಂಡಂತೆ ಇರುವ ಕಾರಣ ನಾನು ಮತ್ತು ರಾಮಯ್ಯ ಸೇರಿಕೊಂಡು ಸ.ನ. **5/1** ಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆಂದರೆ ಸರಿಯಲ್ಲ. ವಿಭಾಗದಲ್ಲಿ ಸ.ನ. **5/1** ರಾಮಯ್ಯರವರ ಭಾಗಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ರಾಮಯ್ಯರವರಿಗೆ ಭಾಗಕ್ಕೆ ಬಂದಿರುವ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ಸ.ನ. **7,** ಪಶ್ಚಿಮಕ್ಕೆ ದಾಸಹನುಮಯ್ಯರವರ ಜಮೀನು, ಉತ್ತರಕ್ಕೆ ಇದೇ ನಂಬರ್ ಪೈಕಿ ಉಳಿಕೆ ಜವೀನು, ದಕ್ಷಿಣಕ್ಕೆ ಲಕ್ಷ್ಮಯ್ಯರವರ ಉಳಿಕೆ ಜಮೀನು ಬಂದಿರುತ್ತದೆ ಎಂದರೆ ಸರಿ, ಸದರಿ ಚಕ್ಕುಬಂದಿ ಒಳಗೆ **2** ಎಕರೆ **1** ಗುಂಟೆ ಇರುತ್ತದೆ. ಉಳಿಕೆ **19** ಗುಂಟೆ ಗೆ ಬೇರೆ ಚಕ್ಕುಬಂದಿ ಬರುತ್ತದೆ. ವಿಭಾಗದ ಪ್ರಕಾರ ಬಂದ ಚಕ್ಕುಬಂದಿ ಒಳಗೆ

**1968** ನೇ ಸಾಲಿನಿಂದಲೂ ರಾಮಯ್ಯರವರೇ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್, ಎರಡೂ ಕಡೆ ಸ್ವಾಧೀನದಲ್ಲಿ ಇದ್ದರು. **1968** ರಿಂದ **2002** ನೇ ಸಾಲಿನವರೆಗೂ **2** ಎಕರೆ **27** ಗುಂಟೆ ಜಮೀನು ಒಂದೇ ಚಕ್ಕುಬಂದಿಯಲ್ಲಿ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಗಳು ಸ.ನ. **5** ನ್ನು ಪೋಡು ಮಾಡಿಸಿಲ್ಲ ಎಂದರೆ ಸರಿಯಲ್ಲ. ರಾಮಯ್ಯನಿಗೆ ಮತ್ತು ನನಗೆ ದಾವಾ ಸರ್ವೆ ನಂಬರ್ ನಲ್ಲಿ ನಮಗೆ ಯಾವುದೇ ಹಕ್ಕು ಅಧಿಕಾರ ಸ್ವಾಧೀನ ಇಲ್ಲದೇ ಇದ್ದರೂ, ಸದರಿ ಸರ್ವೆ ನಂಬರ್ ನ್ನು ಪೋಡ್ ಮಾಡಿ ದಾಖಲೆಗಳನ್ನು ನಮ್ಮ ಹೆಸರಿಗೆ ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. **2** ನೇ ಪ್ರತಿವಾದಿ ಮತ್ತು ಸಂಜೀವಯ್ಯರವರು ಪೋಡಿ ಸಮಯದಲ್ಲಿ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿರುವುದಿಲ್ಲ , ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನನ್ನ ಸ್ವಾಧೀನಕ್ಕೆ ಬಿಟ್ಟುಕೊಡುವಂತೆ ಪ್ರತಿವಾದಿಗಳನ್ನು ಕೇಳಿದ್ದು, ಅವರು ಬಿಟ್ಟುಕೊಡದೇ ಇದ್ದ ಕಾರಣ ಅವರ ವಿರುದ್ಧ ನಾನು ಪೊಲೀಸ್ ಠಾಣೆಯಲ್ಲಿ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.14-21
ಪಿಡಬ್ಲ್ಯೂ-1

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.
*Koratagere.*